ದಿನಾಂಕ 12-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮೇಡಮ್ ಎಸ್ ಕೆ. ಎನ್ ವಕೀಲರವರಿಂದಃ**

ನಾನು ಅರ್ಜಿದಾರರ ಪರ ಸಾಕ್ಷಿದಾರನಾನಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಅರ್ಜಿದಾರರಿಗೆ ಸಂಬಂದಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 13 ಎಂದು, 02 ಎಕ್ಸ್ರೇ ಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯವರು ಅಂಗನ್ಯೂನತೆಯ ಪ್ರಮಾಣ ಪತ್ರ ವನ್ನು ನೋಡಿ ಅದನ್ನು ನಾನೇ ವಿತರಿಸಿರುತ್ತೇನೆ ಎಂದು ಹಾಗೂ ಅದರಲ್ಲಿರುವ ಸಹಿ ನನ್ನದು ಎಂದು ಗುರುತಿಸಿದ್ದು ಅಂಗನ್ಯೂನತೆಯ ಪ್ರಮಾಣ ಪತ್ರ ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 12 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಎದುರುದಾರ ಪರವಾಗಿ ಶ್ರೀ ಎ. ಪಿ. ಹೆಬ್ ವಕೀಲರಿಂದಃ**

ಎಲ್ಲಾ ಚಿಕಿತ್ಸೆಯನ್ನು ಕೆಎಂಸಿ ಆಸ್ಪತ್ರೆಯಲ್ಲಿ ಕೊಟ್ಟಿರುವುದೇ ಎಂದರೆ ಹೌದು. ಅರ್ಜಿದಾರರಿಗೆ ಯಾವುದೇ ಚಿಕಿತ್ಸೆಯು ಬಾಕಿ ಇರುವುದಿಲ್ಲ ಎಂದರೆ ಹೌದು. ಆದರೆ ವ್ಯಾಯಾಮವನ್ನು ಮಾತ್ರ ಮಾಡಬೇಕಾಗುತ್ತದೆ. ಅರ್ಜಿದಾರರಿಗೆ ಚಿಕಿತ್ಸೆ ನೀಡುವುದನ್ನು ನಿಲ್ಲಿಸಿ ಎಷ್ಟು ದಿನ ಆಯಿತು ಎಂದರೆ ಅಂಗನ್ಯೂನತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಾಗ ನಿಲ್ಲಿಸಲಾಯಿತು. ಅರ್ಜಿದಾರರು ಸಾಮಾನ್ಯರಂತೆ ಓಡಾಡುತ್ತಾರೆ ಎಂದರೆ ಹೌದು.

ಅಂಗನ್ಯೂನತೆಯ ಪ್ರಮಾಣ ಪತ್ರವನ್ನು ಅರ್ಜಿದಾರರ ಉದ್ಯೋಗವನ್ನು ಆದರಿಸಿ ನೀಡಿರುವುದಿಲ್ಲ ಎಂದರೆ ಹೌದು. ಅರ್ಜಿದಾರರಿಗೆ ಇಂತಹ ಕೆಲಸವನ್ನು ಮಾಡಬಾರದು ಎಂದು ನೀವು ತಿಳಿಸಿರುತ್ತೀರಾ ಎಂದರೆ ಇಲ್ಲ. ನೀವು ನೀಡಿರುವ ಅಂಗನ್ಯೂನತೆಯ ಪ್ರಮಾಣವು ಸಂಪೂರ್ಣ ದೇಹಕ್ಕೆ ಸಂಬಂದಿಸಿರುವುದಿಲ್ಲ ಎಂದರೆ ಸಂಬಂದಿಸಿರುತ್ತದೆ. ನೀವು ಸಂಪೂರ್ಣ ದೇಹಕ್ಕೆ ಇದೇ ಮೊದಲ ಬಾರಿ ಹೇಳುತ್ತಿರುವುದು. ನಿಪಿ 12 ರಲ್ಲಿ ಮತ್ತು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಅದರ ಬಗ್ಗೆ ಹೇಳಿರುವುದಿಲ್ಲ ಎಂದರೆ ಅದೇ ಅರ್ಥವನ್ನು ಕೊಡುತ್ತದೆ.

ಅಂಗನ್ಯೂನತೆಯನ್ನು ಶಾಶ್ವತ ಅಂಗನ್ಯೂನತೆ, ಭಾಗಶಃ ಅಂಗನ್ಯೂನತೆ ಹಾಗೂ ಸಂಪೂರ್ಣ ದೇಹಕ್ಕೆ ಅಂಗನ್ಯೂನತೆ ಎಂದು ಹೇಳುವ ಕ್ರಮ ಇರುತ್ತದೆ ಎಂದರೆ ಹಾಗೆ ನಾವು ನೀಡುವುದಿಲ್ಲ. ನೀವು ಹೇಳಿರುವಷ್ಟು ಪ್ರಮಾಣದ ಅಂಗನ್ಯೂನತೆಯು ಅರ್ಜಿದಾರರಿಗೆ ಇರುವುದಿಲ್ಲ ಹೆಚ್ಚಿನ ಪರಿಹಾರ ದೊರಕಿಸಿ ಕೊಡುವ ಉದ್ದೇಶದಿಂದ ಹೆಚ್ಚಿನ ಅಂಗನ್ಯೂನತೆಯನ್ನು ಹೇಳಿರುತ್ತೀರಿ ಎಂದರೆ ಸರಿಯಲ್ಲ. ಅಂಗನ್ಯೂನತೆಯು ಒಂದಷ್ಟು ಸಮಯದ ನಂತರ ಎಷ್ಟು ಕಡಿಮೆಯಾಗುತ್ತದೆ ಎಂದು ಈಗ ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಹೌದು. ನೀವು ಹಾಜರು ಪಡಿಸಿರುವ ದಾಖಲೆಗಳ ಅನುಸಾರ ಅರ್ಜಿದಾರರಿಗೆ ಘಟನೆಯ ಪೂರ್ವದ ಕಾಯಿಲೆ ಇತ್ತೇ ಅಥವಾ ಇರುವುದಿಲ್ಲ ಎನ್ನುವುದನ್ನು ನಮೂದಿಸಲಾಗಿದೆಯೇ ಎಂದರೆ ನಮೂದಿಸಲಾಗಿದೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.